# ‘ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ’

**ಸ್ವಾಮಿ ವೀರೇಶಾನಂದ**

**ಶರಣರ ಅನುಭಾವದಿಂದ ಹೊರಹೊಮ್ಮಿದ ಮಾತುಗಳು, ವಚನಗಳು ವೇದಗಳ ಪ್ರತಿಧ್ವನಿಯಂತೆ ಇವೆಯೆಂಬುದು ಸ್ಪಷ್ಟ. ಇವುಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿರುವ ಸ್ವಾಮಿ ವೀರೇಶಾನಂದರು ವಿವೇಕಪ್ರಭ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಏಪ್ರಿಲ್ ೩೦ರಂದು ಆಚರಿಸಲಾಗುವ ಬಸವಣ್ಣನವರ ಜಯಂತಿಯ ಸಂದರ್ಭಕ್ಕಾಗಿ ಈ ವಿಶೇಷ ಲೇಖನ.**

### ಅನುಭಾವವೆಂದರೇನು?

ಮಾನವನ ಬಿಡುಗಡೆಯ ಬಯಕೆಯೇ ಧರ್ಮದ ಉಗಮಕ್ಕೆ ಮೂಲ ಕಾರಣ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಅನುಭಾವದಿಂದಲೆ ಈ ತುಡಿತಕ್ಕೆ ಶಾಂತಿ ದೊರೆಯುತ್ತದೆ. “**ಅನುಭಾವವೆಂಬುವುದು ಅಂತರಂಗದ ರತ್ನ**”, “**ಅನುಭಾವವೆಂಬುವುದು ಆತ್ಮವಿದ್ಯೆ**”, “**ಅನುಭಾವವೆಂಬುವುದು ನಿಜನಿವಾಸದಲ್ಲಿರಿಸುವುದು**”—ಎಂದೆಲ್ಲ ಶರಣರು ತಮ್ಮ ವಚನಗಳಲ್ಲಿ ಬಣ್ಣಿಸುವರು. ಈ ಮಾತುಗಳಿಂದ **ಅನುಭಾವ** ಪದದ ಅರ್ಥವ್ಯಾಪ್ತಿಯನ್ನು ಕಲ್ಪಿಸಿಕೊಳ್ಳಬಹುದು. ಇಂಗ್ಲಿಷಿನ ಮಿಸ್ಟಿಸಿಸಮ್ (mysticism) ಪದಕ್ಕೆ ಇದು ಸಮಾನಾರ್ಥಕವಾಗಿದೆ. ಸತ್ಯವನ್ನು ಸಾಕ್ಷಾತ್ತಾಗಿ ಅಥವಾ ನೇರವಾಗಿ ಅರಿತು ಅನುಭವಿಸುವುದೇ ಅನುಭಾವವೆನ್ನಿಸಿಕೊಳ್ಳುತ್ತದೆ. ಅನುಭಾವದ ಅನುಭವ ಇಂದ್ರಿಯಾತೀತವಾಗಿದ್ದು ಅದು ಕಾಲ, ದೇಶಗಳಿಗೆ ಅತೀತವಾದ ಪರಿಶುದ್ಧ ಇರುವಿಕೆಯ ಪರಮಸ್ಥಿತಿ. ಈ ಶಬ್ದ ಕನ್ನಡದ ಶರಣರು ಅಧ್ಯಾತ್ಮ ಪ್ರಪಂಚಕ್ಕೆ ಕೊಟ್ಟ ಒಂದು ದೊಡ್ಡ ಕೊಡುಗೆ ಎನ್ನಬಹುದು. ಇದರ ಗಹನತೆಯನ್ನು ಅವರ ಮಾತುಗಳ ಮೂಲಕವೇ ಗ್ರಹಿಸಬೇಕು; ಇದರ ವಿಶಾಲತೆಯನ್ನು ಅವರ ಅನುಭವಾಮೃತದಲ್ಲಿಯೇ ಅರ್ಥೈಸಿಕೊಳ್ಳಬೇಕು.

### ಕನ್ನಡದ ಉಪನಿಷತ್ತುಗಳು – ಕನ್ನಡನಾಡಿನ ಮಹರ್ಷಿಗಳು

ಕನ್ನಡದ ಹೆಸರಾಂತ ಲೇಖಕರಾದ ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿಗಳು **ವಚನಧರ್ಮಸಾರ** ಎಂಬ ತಮ್ಮ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ: “ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವಿಹರಿಸುತ್ತ ಬರುವಾಗ ಒಂದು ಕಡೆ ತಪೋವನವನ್ನು ಪ್ರವೇಶಿಸಿದಂತೆ ಆಗುವುದು. ಇಲ್ಲಿ ಸಹಜ ಶಾಂತಿ, ಪರಸ್ಪರ ಪ್ರೇಮ, ಸಮತಾ ಭಾವ, ಸ್ವಾತಂತ್ರ್ಯ—ಇವು ಮೂರ್ತಿವತ್ತಾಗಿ ಕಾಣುತ್ತವೆ. ...ಇಲ್ಲಿ ವಚನಧರ್ಮ ಸಿದ್ಧಾಂತವಾಗಿ, ಸತ್ಯದ ಹಂಬಲು ಸಾಹಿತ್ಯವಾಗಿ, ಸತ್ಯಾನ್ವೇಷಣೆಯೇ ಸಿದ್ಧಾಂತವಾಗಿ ಸತ್ಯ ಸಾಕ್ಷಾತ್ಕಾರವೇ ದರ್ಶನವಾಗಿ ನಮಗೆ ಆನಂದವನ್ನು ಉಂಟುಮಾಡುತ್ತದೆ. ಕನ್ನಡ ಸಾಹಿತ್ಯದ ತಪೋವನದಲ್ಲಿ ವಚನ ಸಾಹಿತ್ಯವೇ ಉಪನಿಷತ್ ಸಾಹಿತ್ಯ. ವಚನಕಾರರೇ ಇಲ್ಲಿ ಮಹರ್ಷಿಗಳು.”

ವಚನ ಸಾಹಿತ್ಯದಲ್ಲಿ ಕಂಡುಬರುವುದು ವಚನಕಾರರ ವೈಯಕ್ತಿಕ ಭಾವನೆ, ಅವರ ಅಂತರಂಗದ ಹೋರಾಟ, ಧರ್ಮಬೋಧೆ ಮತ್ತು ಹೃದಯದಿಂದ ಹೊರಟು ನೇರವಾಗಿ ಹೃದಯವನ್ನು ಮುಟ್ಟುವ ಸರಳ ಶೈಲಿ. ಇವು ಇರುವುದರಿಂದ ಈ ಸಾಹಿತ್ಯದಲ್ಲಿ ಜೀವಕಳೆ ಇದೆ, ಅಮೂಲ್ಯವಾಗಿದೆ.



‘ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ. ಲಿಂಗಾನುಭಾವದಿಂದ ನಿಮ್ಮ **ಕಂಡೆನ್ನ ಮರೆದೆ ಕೂಡಲ ಸಂಗಮದೇವಾ**’

ವಚನಧರ್ಮದ ದಿಗ್ಗಜರು ಐದು ಜನ ಮಹಾನುಭಾವರು. ಅವರಲ್ಲಿ ಇಷ್ಟಲಿಂಗವಾಗಿ ಬಸವಣ್ಣ, ಪ್ರಾಣಲಿಂಗವಾಗಿ ಚೆನ್ನಬಸವಣ್ಣ ಮತ್ತು ಭಾವಲಿಂಗವಾಗಿ ಅಲ್ಲಮಪ್ರಭುಗಳು ಬೆಳಗುತ್ತಿರುವುದು ಕಂಡುಬರುತ್ತದೆ. ಇವರೊಡನೆ ಮಹಾಕರ್ಮಿ ಸಿದ್ಧರಾಮ ಮತ್ತು ಲಿಂಗಪತಿಗೆ ಶರಣಸತಿಯಾದ ಮಹಾದೇವಿ ಅಕ್ಕನವರು ಸೇರಿಕೊಂಡರೆ, ಪಂಚಸದಾಖ್ಯ ಲಿಂಗದಂತೆ, ಪಂಚಮುಖವಾದರೂ ಏಕಹೃದಯದ ಏಕಮೂರ್ತಿಯಾಗಿ ವಚನಧರ್ಮವು ಕಂಗೊಳಿಸುವುದು. ಈ ಐವರ ಜೀವನಮಾರ್ಗದಲ್ಲಿ ಮತ್ತು ವಚನಗಳಲ್ಲಿ ಶರಣಧರ್ಮದ ಸಂಪೂರ್ಣ ಸ್ವರೂಪವನ್ನು ಕಾಣುತ್ತೇವೆ; ಇವರ ಸಾಧನಾಮಾರ್ಗದಲ್ಲಿ ಶರಣಧರ್ಮದ ಒಂದೊಂದು ಮುಖ ಎದ್ದುಕಾಣುತ್ತದೆ.

### ಸಂತೃಪ್ತಿಯ ಮಹಾಮನೆ

**ತಮ್ಮ ವಚನಸಾಹಿತ್ಯ ಸಂಗ್ರಹ**ದ ಪರಿಚಯದಲ್ಲಿ ಶ್ರೀ ಸಂ.ಶಿ. ಭೂಸನೂರಮಠ ಹೀಗೆ ಬರೆಯುತ್ತಾರೆ: ‘ಹೊರಗೆ ಕಾಣುವ

ಜಗತ್ತನ್ನು ಮುಂದಿಟ್ಟುಕೊಂಡು ಹೊರಗನ್ನು ಪರೀಕ್ಷಿಸಬಹುದು. ಆದರೆ ತನ್ನೊಳಗೆ ನಡೆದಿರುವ ಅಂತಃಪ್ರಪಂಚದ ಸೂಕ್ಷ್ಮವಾದ ಜಾಲವನ್ನು ಎದುರಿಗೆ ಇಟ್ಟುಕೊಂಡು ನೋಡುವ ಸಾಮರ್ಥ್ಯ ಸುಲಭಸಾಧ್ಯವಲ್ಲ. ಹೊರಗನ್ನು ನೋಡುವಂತೆ ಒಳಗನ್ನೂ ಹೊರಗಿಟ್ಟುಕೊಂಡು ಎದುರಿಟ್ಟುಕೊಂಡು ನೋಡಿ. ಇಲ್ಲಿಯೂ ಪ್ರಯೋಗಶಾಲೆ ಕಟ್ಟಬೇಕು. ಮಾನುಷ ಪ್ರಯೋಗಶಾಲೆಯಲ್ಲಿ ದೇಹ ಪ್ರಾಣ ಇಂದ್ರಿಯ ಮನ ಬುದ್ಧಿ ಭಾವಗಳ ವ್ಯಾಪಾರವನ್ನು ನೋಡಿ ಕಂಡು ಒಂದು ಮಹಾ ನಿರ್ಣಯಕ್ಕೆ ಬಂದ ಧೀರ ಬಸವಣ್ಣ ಹೇಳುತ್ತಾನೆ: '**ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ. ಲಿಂಗಾನುಭಾವದಿಂದ ನಿಮ್ಮ ಕಂಡೆನ್ನ ಮರೆದೆ ಕೂಡಲ ಸಂಗಮದೇವಾ**' ವಚನಕಾರರ ಪ್ರಕಾರ ಅನುಭಾವದ ಆಶ್ರಯ ವಿಲ್ಲದೆ ಮಾನವನ ಅರಿವಿಗೆ ತೃಪ್ತಿಯಾಗದು. ಬಸವಣ್ಣನವರು ಹೇಳುವ ತೃಪ್ತಿ ಕರಣ ಇಂದ್ರಿಯಗಳು ಅಳಿದರೂ ಅವಿನಾಶಿ ಯಾದ ತೃಪ್ತಿ. ಈ ಸಂತೃಪ್ತಿಯ ಮಹಾಮನೆಯೇ ಅನುಭಾವ. ಅದೇ ಲಿಂಗಾನುಭವ."

**ವಿಪರೀತದ ಬೆಳಗು**

ಲಿಂಗಾನುಭವವನ್ನು ಎಲ್ಲಿ ಹುಡುಕಬೇಕು? ಅಂಬಿಗರ ಚೌಡಯ್ಯ ಹೀಗೆ ಹೇಳುತ್ತಾನೆ:

**ಅಡವಿಯೊಳಗರಸುವೆಡೆ ಸಿಡಿಗಂಟಿ ತಾನಲ್ಲ**
**ಮಡುವಿನೊಳಗರಸುವೆಡೆ ಮತ್ಸ್ಯ ಮಂಡುಕನಲ್ಲ**
**ಒಡಲ ದಂಡಿಸುವಡೆ ಕೊಡುವ ಸಾಲಿಗನಲ್ಲ**
**ಅಷ್ಟತನುವಿನೊಳಗೆ ಹುದುಗಿರ್ಪ ಲಿಂಗವ**
**ನಿಲುಕಿ ನೋಡಿಯೆ ಕಂಡನಂಬಿಗ ಚೌಡಯ್ಯ.**

ಹಾಗಾದರೆ ದೇಹದಲ್ಲಿ ಇದ್ದಾನೆಯೇ ದೇವರು ಎಂದರೆ ಅಲ್ಲಿಯೂ ಇಲ್ಲ ಎನ್ನುತ್ತಾನೆ ಅಲ್ಲಮಪ್ರಭು. ದೇಹಕ್ಕಿಂತ, ಪ್ರಾಣ ಕ್ಕಿಂತ, ಸೂಕ್ಷ್ಮವಾದ ಮನವೇ ಹಿಡಿಯಲಾರದ ಬ್ರಹ್ಮವನ್ನು ಶರೀರದಲ್ಲಿ ಹುಡುಕುವುದು ಹುಚ್ಚುತನ ಎಂದು ಅವನ ಗ್ರಹಿಕೆ. ಮಾನವನ ನಿಜಸ್ಥಲ, ಸ್ವಸ್ಥಲ, ಪರಾತ್ಪರವಾದ, ಮನಕ್ಕೆ ಘನ ವಾದ, ದೂರಕ್ಕೆ ದೂರ, ಸಮೀಪಕ್ಕೆ ಸಮೀಪವಾದ, ಒಳಗಿನ ಒಳಗಿರುವ, ಹೊರಗಿಗೆ ಹೊರಗಾಗಿ ಇರುವ ಲಿಂಗದೇವನನ್ನು ಮುಟ್ಟಿ ತಾನೂ ಲಿಂಗವಾಗಿ ಇರುವ ಅಪರೋಕ್ಷ ಅನುಭವದ ಮೂಲಕ ಮಾತ್ರ ವೇದ್ಯವಾಗುವುದು ಎನ್ನುವುದು ಶರಣರ ಅಭಿಪ್ರಾಯ. ಜಗತ್ತಿನ ಅರಿವೆಂಬುದೇ ಕತ್ತಲೆಯ ಗವಿ. ಗವಿಯಾಚೆ ಹೊರಬಂದರೆ ಎಲ್ಲ ಬೆಳಗು. ಗವಿಯಲ್ಲಿ ಮನುಷ್ಯ, ಹೊರಗೆ ಬಂದರೆ ಲಿಂಗ. ಗವಿಯಲ್ಲಿ ಜೀವಿ, ಹೊರಗೆ ಲಿಂಗಾನು ಭವಿ. ಅಲ್ಲಮಪ್ರಭು ಇದನ್ನು ಸೊಗಸಾಗಿ ವಿವರಿಸುತ್ತಾನೆ:

**ಅಪರಿಮಿತದ ಕತ್ತಲೆಯೊಳಗೆ ವಿಪರೀತದ ಬೆಳಗನಿಕ್ಕಿದವನಾರೊ?**
**ಬೆಳಗೂ ಅದೆ, ಕತ್ತಲೆಯೂ ಅದೆ! ಇದೇನು ಚೋದ್ಯವೋ?**
**ಒಂದಕ್ಕೊಂದಂಜದು, ಆನೆಯೂ ಸಿಂಹವೂ ಒಂದಾಗಿ**
**ಉಂಬುದ ಕಂಡು ಬೆರಗಾದೆನು ಕಾಣಾ ಗುಹೇಶ್ವರಾ!**

ಆ ಬೆಳಕು ಚೈತನ್ಯದ ಮಹಾಬೆಳಗು, ವಿಶ್ವಬ್ರಹ್ಮಾಂಡವನ್ನೇ ತನ್ನ ಹೊಟ್ಟೆಯಲ್ಲಿ ಇಟ್ಟುಕೊಂಡಿರುವ "ವಿಪರೀತದ ಬೆಳಗು". ಈ ಬೆಳಕಿನ ರೂಪ. ವ್ಯಷ್ಟಿಗತವಾದ ಪಿಂಡಾಂಡವೆ ಇರಲಿ ಸಮಷ್ಟಿ ಸ್ವರೂಪವಾದ ಬ್ರಹ್ಮಾಂಡವೆ ಇರಲಿ, ಅಲ್ಲೆಲ್ಲ ಇರುವ ಚೈತನ್ಯಸ್ವರೂಪ.

**ಪಿಂಡಬ್ರಹ್ಮಾಂಡಂಗಳ ಕೂಡಿಪ್ಪ ಸೌರಾಷ್ಟ್ರ ಸೋಮೇಶ್ವರ**
**ಲಿಂಗವನಾರು ಭೇದಿಸಬಾರದಯ್ಯ.**

ಸ್ವಯಂಭುವಾಗಿ ನಿಂದಿರುವ ಆ ಪರವಸ್ತುವನ್ನು "ತಂದೆ ಇಲ್ಲದ, ತಾಯಿಯಿಲ್ಲದ ಕಂದ" ಎಂದು ಅಣಕವಾಡುತ್ತಾನೆ ಅಲ್ಲಮಪ್ರಭು.

**ತಾಯಿ ತಂದೆಯಿಲ್ಲದ ಕಂದಾ, ನಿನಗೆ ನೀನೆ ಹುಟ್ಟಿದೆಯಲ್ಲಾ!**
**ನಿನ್ನ ಪರಿಣಾಮವೆ ನಿನಗೆ ತೃಪ್ತಿಯಾಗಿರ್ದೆಯಲ್ಲಾ !**
**ಭೇದಕರಿಗೆ ಅಭೇದ್ಯನಾಗಿ ನಿನ್ನ ನೀನೆ ಬೆಳಗುತ್ತಿರ್ದೆಯಲ್ಲಾ !**
**ನಿನ್ನ ಚಾರಿತ್ರ ನಿನಗೆ ಸಹಜ ಗುಹೇಶ್ವರಾ.**

ತನಗೆ ತಾನೆ ಬೆಳಗುತ್ತಿರ್ದ ಸ್ವಯಂತೃಪ್ತಿ ಲಿಂಗಕ್ಕೆ, ಸ್ವಯಂ ಜ್ಯೋತಿಯಾಗಿ ಬೆಳಗುವುದೇ ಸಹಜ ಚರಿತ್ರವಾಗಿದೆ. ಇದೇ ಲಿಂಗಾನುಭವವೆಂದು ಹೇಳಿದರೂ ಅದರ ಹರವು ಅದಕ್ಕಿಂತ ವಿಸ್ತಾರವಾದುದು. ಆ ಸ್ವಾನುಭವದ ವಿಸ್ತಾರ, ಎಲ್ಲ ನಾಮ ರೂಪಗಳ ಸೀಮೆಯನ್ನೂ ದಾಟುತ್ತದೆ. ಅಲ್ಲಿ ನಿಜವಾದ ಅರಿವಾಗುತ್ತದೆ; ಅನುಭವದಲ್ಲಿರುವ ನರನೇ ದೇವ; ಅಲ್ಲಮನ ಪ್ರಕಾರ ಗುಹೇಶ್ವರನೆಂಬ ಬೇರೆ ದೇವನಿಲ್ಲ.

**ಊರೊಳಗೊಬ್ಬ ದೇವ, ಮಡುವಿನಲೊಬ್ಬ ದೇವ,**
**ಅಡವಿಯಲೊಬ್ಬ ದೇವ, ಮಡಿಲಲೊಬ್ಬ ದೇವ.**
**ನೀರ ನೀರ ಕೂಡಿ, ಬಯಲು ಬಯಲ ಕೂಡಿ,**
**ನರನೆಂಬ ದೇವ ತಾ ನಿರಾಳವೋ! ಲಿಂಗವೆಂಬುದೊಂದು**
**ಅನಂತದ ಹೆಸರು. ಗುಹೇಶ್ವರನೆಂಬುದದೇನೋ?**

ಸಂ.ಶಿ. ಭೂಸನೂರಮಠ ಈ ಪರಮಾನುಭವವನ್ನು ಹೀಗೆ ಬಣ್ಣಿಸುತ್ತಾರೆ: "ಹೆಸರಿಲ್ಲದ ಈ ನಿರಾಳದ ಅರಿವಿಗೆ ಹೆಸರು ಕೊಟ್ಟರೆ ಅದು ನಿರಾಳಲಿಂಗ. ಇಂಥ ಲಿಂಗಾನುಭವದಿಂದ ನರದೇವನ ಅರಿವಿಗೆ ತೃಪ್ತಿಯಾಗಿದೆ. ಹಡೆದ ತಾಯಿಯನ್ನು ಕಣ್ಣು ಮುಚ್ಚಿ ಕಂಡ ಮಗು ತೃಪ್ತಿ ಹೊಂದುವಂತೆ, ಅರಿವಿಗೆ ತನ್ನ ತಾಯಿ ಚಿನ್ಮಯಿ ಚಿನ್ಮಾತೆ ಚಿತ್ರಕಾಶ ಸ್ವಯಂಭುವಾಗಿ ತನ್ನೊಳಗಿಂದಲೆ ಒಡಮೂಡಿದರೆ ಆಗ ನಿಜವಾದ ತೃಪ್ತಿ". ಆಗ "ಅಂತರಂಗವೆಲ್ಲ ಅರುಹಾಯಿತ್ತು, ಬಹಿರಂಗವೆಲ್ಲ ಲಿಂಗ ವಾಯಿತ್ತು."

ಶರಣರ ಆಧ್ಯಾತ್ಮಿಕ ಅನ್ವೇಷಣೆ ಇಲ್ಲಿಗೆ ಕೊನೆಗೊಳ್ಳುವುದಿಲ್ಲ. ಇಲ್ಲಿಗೆ ಮಾನವ ಜೀವನದ ಮಹಾಸಮಸ್ಯೆ ಬಗೆಹರಿಯುವುದಿಲ್ಲ ಎನ್ನುತ್ತಾರೆ ಅವರು. ಅವರು ಕೇಳುವ ಪ್ರಶ್ನೆ ಇದು: "ಅರಿವನ್ನು ಧರಿಸಿಕೊಂಡಿರುವ ಮನ ಬುದ್ಧಿ ಪ್ರಾಣ ದೇಹಾದಿಗಳನ್ನು,

ಅವುಗಳನ್ನು ಒಳಗೊಂಡಿರುವ ವಿಷಯಪ್ರಪಂಚವನ್ನು ಮಿಥ್ಯೆ ಎಂದು, ಮಾಯೆ ಎಂದು, ಹೇಯ ಎಂದು ಒಗೆಯುವ ವೈರಾಗ್ಯದ ಅರ್ಥವೇನು?" ಎಂದು. ಯಾವುದನ್ನೂ ತುಚ್ಛ ವೆಂದು ಕರೆಯಬಾರದು. ನಿಜವಾದ ಅರಿವು ಎಲ್ಲವನ್ನೂ ಒಳ ಗೊಂಡಿರಬೇಕು. ಶರಣರ ಮತ ಏನು ಗೊತ್ತೇ? ದೇಹ ಮೊದಲಾಗಿ ಅರಿವು ಕಡೆಯಾಗಿರುವ ಸರ್ವಾಂಗಮಾನವ ಲಿಂಗ ವನ್ನು ಅನುಭವಿಸಿ, ಎಲ್ಲ ಅಂಗದ ಆಪ್ಯಾಯಮಾನವೂ ತೃಪ್ತಿವಡೆಯಬೇಕು ಎಂಬುದು. ಮಾನವ ತನ್ನ ಸರ್ವಾಂಗದಲ್ಲಿ ಲಿಂಗವನ್ನು ಕಂಡು ಲಿಂಗವನ್ನು ಅನುಭವಿಸಿ ಲಿಂಗಮುಖವಾಗಿ ಸಾಗುತ್ತಿರುವಂತೆ, ತನ್ನ ಸುತ್ತಮುತ್ತಿರುವ ಬಾಹ್ಯಪ್ರಪಂಚವನ್ನೂ ಲಿಂಗಕ್ಕೆ ಅಭಿಮುಖವಾಗಿ ಕೊಂಡೊಯ್ಯಬೇಕೆಂಬುದು ಶರಣರ ಲಿಂಗಮಾರ್ಗದ ಮಹಾಗಭೀರಾರ್ಥ. ಇಲ್ಲಿ ಅಂಗವೆಂದರೆ ಪ್ರಕೃತಿಯ, ಜಡದ ಸಂಕೇತ; ಬರಿಯ ಮಾನವ ಅಂಗವಲ್ಲ.

ಇದಕ್ಕೆ ಸಾಧನೆ ಬೇಕು. ವಚನಕಾರನೊಬ್ಬ ಹೇಳುವಂತೆ ಸರ್ವಾಂಗವು ಲಿಂಗವಾಗಬೇಕು, ಭಕ್ತನಾದ ಶರಣ ತನ್ನದೆಲ್ಲ ವನ್ನೂ ಸಮರ್ಪಿಸಿ ಸಮರಸವಾಗಿ ಲಿಂಗದಲ್ಲಿ ಕೂಡಬೇಕು. ಶರಣರ ನುಡಿಯಲ್ಲಿ "ನಾನೆತ್ತ ಹೋದೆನು ಎಂದು ಅರಿಯದ, ನಿಮ್ಮ ಕಂಡೆನ್ನ ಮರೆದವ"ನಾಗಬೇಕು.

**ಅಂತರಂಗ ಬಹಿರಂಗ ಶುದ್ಧವಿಲ್ಲದೆ ನುಡಿವರು, ...**
**ಅಂತರಂಗ ಬಹಿರಂಗವೆಂಬುದಿಲ್ಲ ನಮ್ಮ ಶಿವಶರಣರಿಗೆ**
**ಅಂತರಂಗವೆಲ್ಲ ಅರುಹಾಯಿತ್ತು, ಬಹಿರಂಗವೆಲ್ಲ ಲಿಂಗವಾಯಿತ್ತು.**
**ಆ ಲಿಂಗದಲ್ಲಿ ನುಡಿದು, ಲಿಂಗದಲ್ಲಿ ನಡೆದು, ಲಿಂಗದಲ್ಲಿ ಮುಟ್ಟಿ,**
**ಲಿಂಗದಲ್ಲಿ ವಾಸಿಸಿ, ಲಿಂಗದಲ್ಲಿ ಕೇಳಿ, ಲಿಂಗವಾಗಿ ನೋಡಿ,**
**ಸರ್ವಾಂಗವು ಲಿಂಗವಾಗಿ, ಆ ಲಿಂಗವ ನೋಡುವ ಕಂಗಳಲ್ಲಿ**
**ಐಕ್ಯ ಕಂಡಯ್ಯಾ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.**

ಅಂತರಂಗ ಬಹಿರಂಗವನ್ನು ಶುದ್ಧಗೊಳಿಸಿದ ಅನುಭಾವದಲ್ಲಿ ಅಂತರಂಗದ ಅರುಹು ಬಹಿರಂಗವೆನಿಸುವ ದೇಹ ಪ್ರಾಣ ಇಂದ್ರಿಯಗಳಲ್ಲೂ ಹಬ್ಬುತ್ತದೆ; ನಂತರ ಬ್ರಹ್ಮಾಂಡಕ್ಕೂ ಹಬ್ಬುತ್ತದೆ. ಆಗ ಎಲ್ಲವೂ ಚೈತನ್ಯಮಯವಾಗುತ್ತದೆ. ಈ ಚೈತನ್ಯವನ್ನೇ ಲಿಂಗವೆಂದು ಕರೆಯುವರು ವಚನಕಾರರು. ಲಿಂಗಕ್ಕೆ ಮನೆ ಯಾಗಿರುವ ತನುವೇ ಮಹಾತನು; ಲಿಂಗದಲ್ಲಿ ಮನ ಬೆಳೆದರೆ ಅದೇ ಘನಮನ; ಪ್ರಾಣ ಚಿತ್‌ಪ್ರಾಣ, ಭಾವ ಸದ್ಭಾವ; ಕರಣ ಚಿತ್ಕರಣ; ಸರ್ವೇಂದ್ರಿಯ ಚಿದಿಂದ್ರಿಯ; ಸರ್ವವಿಷಯ ನಿರ್ವಿಷಯ. ಹೀಗೆ ಚೈತನ್ಯವೆಂದು ಅನುಭವಿಸಿದ ಎಲ್ಲವೂ ಘನವಾಗುತ್ತದೆ, ಚಿತ್ತಾಗುತ್ತದೆ ಮತ್ತು ಮಹತ್ತಾಗುತ್ತದೆ.

ಇದು ಅಂತರಂಗದ ವಿಚಾರ. ಇನ್ನು ಬಾಹ್ಯಪ್ರಂಚಕ್ಕೆ ಬರುವುದಾದರೆ, ಶರಣರು ಕಂಡ ವಿಶ್ವರೂಪ ಎಂತಹುದು ಎನ್ನುವುದನ್ನು ಅವರ ಮಾತುಗಳಲ್ಲೇ ಕೇಳಬೇಕು.

ಶರಣ ಆದಯ್ಯ ಹೇಳುತ್ತಾನೆ:

**ಬೀಜದೊಳಗಿನ ವೃಕ್ಷ ಅಂಕುರ ಪಲ್ಲವ ಪತ್ರ ಕುಸುಮ ಫಲ ಮೈದೋರಿದಂತೆ.. ಪಿಂಡ ಬ್ರಹ್ಮಾಂಡಗಳ ಕೂಡಿಪ್ಪ ಸೌರಾಷ್ಟ್ರ ಸೋಮೇಶ್ವರಲಿಂಗವನಾರೂ ಭೇದಿಸಬಾರದಯ್ಯ.**

ವಿಶ್ವವ ತಿಳಿದು ನೋಡಲು ಲಿಂಗವನ್ನು ಬಿಟ್ಟು ಬೇರೆ ತಾನೇ ಏನಿದೆ ಎಂದು ಪ್ರಶ್ನಿಸುತ್ತಾನೆ ಚಂದಿಮರಸನೆಂಬ ವಚನ ಕಾರ, ತನ್ನ ಈ ವಚನದಲ್ಲಿ:

**ಘನಗಂಭೀರ ಮಹಾವಾರುಧಿಯಲ್ಲಿ ನೊರೆ ತೆರೆ ಬುದ್ಬುದ ಫೇನ**
**ತರಂಗಗಳು ತೋರಿತ್ತಲ್ಲಾ ಎಂದೆಡೆ, ಅವು ಬೇರಾಗಬಲ್ಲವೇ?**
**ಪರಶಿವನೆಂಬ ಅಂಬುಧಿಯಲ್ಲಿ ಸಕಲ ಬ್ರಹ್ಮಾಂಡಗಳಾದವಲ್ಲದೆ**
**ಬೇರಾಗಬಲ್ಲವೆ? ಇದ ಬೇರೆಂಬ ಅರೆಮರುಳರ ನಾನೇನೆಂಬೆ?**
**ವಿಶ್ವವ ತಿಳಿದು ನೋಡಲು ಚಿಮ್ಮಲಿಗೆಯ ಚೆನ್ನರಾಮನೆಂಬ**
**ಲಿಂಗವು ತಾನೆ?**

ಎಲ್ಲವೂ ಚೈತನ್ಯವಾದರೆ, ವ್ಯವಹಾರದ ಜಗತ್ತಿನ ಗತಿ ಯೇನು? ವಚನಕಾರರ ಅನುಭಾವದಂತೆ ಏಕಮೇವ ಅದ್ವಿತೀಯವಾದ ಬ್ರಹ್ಮ ಸತ್ಯವಾದರೆ, ಅದರಿಂದ ಹೊರಬಂದ ಜಗತ್ತೂ ಸತ್ಯವೇ. ಸಮುದ್ರ, ತರಂಗಗಳು ಬೇರೆಯಲ್ಲ. ಬ್ರಹ್ಮವೆಂಬ ಸಮುದ್ರವನ್ನು ಕಡೆಗಣಿಸಿ, ಮೇಲೆ ಎದ್ದು ತೋರುವ ಪ್ರಪಂಚವೆಂಬ ತರಂಗವನ್ನೇ ಶಾಶ್ವತ ಸತ್ಯವೆಂದು ಅದಕ್ಕೇ ಅಂಟಿಕೊಂಡಿರುವುದು ಎಷ್ಟು ಅನುಚಿತವೋ, ಬ್ರಹ್ಮಸಾಗರಕ್ಕೆ ಇರುವ ಪ್ರಪಂಚತರಂಗದ ಅಭಿವ್ಯಕ್ತಿಯನ್ನು ಮಾಯೆಯೆಂದು ತಿರಸ್ಕರಿಸುವುದೂ ಅಷ್ಟೇ ಅನುಚಿತ. ಬ್ರಹ್ಮ ಒಂದು, ಒಂದೇ ಹಲವಾಗಿದೆ. ಒಂದು ಸತ್ಯವಾಗಿದೆ, ಹಾಗೆಯೇ ಹಲವೂ ಸತ್ಯ ವಾಗಿದೆ. ಒಂದು ಮತ್ತು ಹಲವೂ ಸೇರಿಯೇ ಪರಿಪೂರ್ಣ ಸತ್ಯವಾಗುವುದು. ಒಂದನ್ನು ಬಿಟ್ಟು ಇನ್ನೊಂದನ್ನು ಮಾತ್ರ ಪರಿಗಣಿಸುವುದು ಸತ್ಯವಾಗದು. ವಚನಕಾರರ ಪ್ರಕಾರ, "ಏಕಮೇವ ಬ್ರಹ್ಮ" ಮತ್ತು "ಸರ್ವಂ ಬ್ರಹ್ಮ" ಈ ಎರಡೂ ಭಾವನೆಗಳು ಸೇರಿದಾಗಲೇ ಬ್ರಹ್ಮಸಮನ್ವಯವಾಗುವುದು. ಇದೋ ಬನ್ನಿ, ಷಣ್ಮುಖಸ್ವಾಮಿಗಳೆಂಬ ಅನುಭಾವಿಗಳ ಅನುಭವದ ಮಾತು ಕೇಳೋಣ:

**ಸಕಲ ವಿಸ್ತಾರದೊಳಗೆಲ್ಲ ಲಿಂಗವ ತೋರಿದ**
**ಆ ಲಿಂಗದೊಳಗೆ ಎನ್ನ ತೋರಿದ.**
**ಎನ್ನೊಳಗೆ ತನ್ನ ತೋರಿದ ಮಹಾಗುರುವಿಂಗೆ**
**ನಮೋ ನಮಃ ಎಂಬೆನಯ್ಯ ಅಖಂಡೇಶ್ವರಾ**

ಸ್ವತಂತ್ರ ಸಿದ್ಧಲಿಂಗೇಶ್ವರರೆಂಬ ಇನ್ನೊಬ್ಬ ಅನುಭಾವಿಗಳು ತಮ್ಮ ಸಮನ್ವಯಸಿದ್ಧಿಯ ಅನುಭವವನ್ನು ಹೀಗೆ ವಿವರಿಸುತ್ತಾರೆ:

**ಶಿವನೇ ತಾನೆನಗೆ ಗುರುವಾಗಿ ಬಂದು,**
**ಎನ್ನ ಸಂಸಾರಸಾಗರವ ದಾಂಟಿಸಿ,**
**ಅಖಂಡ ಪರಮ ಚೈತನ್ಯ ಶಿವಲಿಂಗವ**
**ವಿಶ್ವದೊಳಗೆಲ್ಲಿಯೂ ಕಾಂಬಂತೆ ತೋರಿಸಿ,**

ವಿಶ್ವವ ಲಿಂಗದೊಳಗೆ ತೋರಿ,
ಲಿಂಗವನೆನ್ನಂಗದೊಳ ಹೊರಗೆ ತೋರಿ,
ಅಂಗವ ಲಿಂಗದೊಳಗಿರಿಸಿ ರಕ್ಷಿಸಿದನಯ್ಯ
ಎನ್ನ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು

ಅಂಗ ಲಿಂಗ ಸಮರಸವಾಗಿ ನಿಂದ ಪರಮೈಕ್ಯಸ್ಥಲದ ಬ್ರಹ್ಮ ಭವ್ಯವ ಅನುಭಾವವಿದು. ಷಣ್ಮುಖಸ್ವಾಮಿ ಹೇಳುತ್ತಾರೆ:

..ಪಿಂಡ ಬ್ರಹ್ಮಾಂಡಯೋರೈಕ್ಯಂ – ಎಂಬ ಶ್ರುತಿಪ್ರಮಾಣದಿಂದ
ಆ ಪಿಂಡ ಬ್ರಹ್ಮಾಂಡಗಳು ಒಂದೇ ಎಂದು ಕಂಡು
ಆ ಪಿಂಡ ಬ್ರಹ್ಮಾಂಡಗಳಿಗೆ ತಾನೇ ಆಧಾರವೆಂದು ತಿಳಿದು
ಆ ಪಿಂಡ ಬ್ರಹ್ಮಾಂಡಗಳ ತನ್ನ ಮನದ ಕೊನೆಯಲ್ಲಿ ಅಡಗಿಸಿ
ಆ ಮನವ ಭಾವದ ಕೊನೆಯಲ್ಲಿ ಅಡಗಿಸಿ,
ಆ ಭಾವವ ಜ್ಞಾನದ ಕೊನೆಯಲ್ಲಿ ಅಡಗಿಸಿ
ಆ ಜ್ಞಾನವ ಮಹಾಜ್ಞಾನದಲ್ಲಿ ಅಡಗಿಸಿ,
ಆ ಮಹಾಜ್ಞಾನವನ್ನು ಪರಾತ್ಪರವಾದ
ಪರಿಪೂರ್ಣ ಬ್ರಹ್ಮದಲ್ಲಿ ಅಡಗಿಸಿ,
ಆ ಬ್ರಹ್ಮವೆ ತಾನಾದ ಶರಣಂಗೆ ದೇಹಭಾವವಿಲ್ಲ;
ಆ ದೇಹಭಾವವಿಲ್ಲವಾಗಿ ಜೀವಭಾವವಿಲ್ಲ.
ಆ ಜೀವಭಾವವಿಲ್ಲವಾಗಿ ಫಲ ಪದದ ಹಂಗಿಲ್ಲ
ಫಲ ಪದದ ಹಂಗಿಲ್ಲವಾಗಿ ಭವಬಂಧನಂಗಳು ಮುನ್ನವೆ ಇಲ್ಲ.
ಭವಬಂಧನಗಳು ಇಲ್ಲವಾಗಿ
ಆ ಶರಣನು ತಾನು ಎಂತಿರ್ದನಂತೆ ಪರಬ್ರಹ್ಮವೆ ಆಗಿ
ಆತನ ಹೃದಯಾಕಾಶವು ಬಚ್ಚಬರಿಯ ಬಯಲನೆಯ್ದಿಪ್ಪುದು
ಇದು ಕಾರಣ, ಆ ಶರಣನು ದೇಹವಿದ್ದು ಸುಟ್ಟ ಸರವಿಯಂತೆ
ನಿರ್ದೇಹಿಯಾದ ಕಾರಣ ಉಪಮಾತೀತ,
ವಾಙ್ಮನಕ್ಕಗೋಚರನಾಗಿಪ್ಪನಯ್ಯ ಅಖಂಡೇಶ್ವರಾ

ಈ ಅನುಭವದಲ್ಲಿ ಇರವಿನ ಹರವು, ಅರಿವಿನ ಬೆಳಗು, ಆನಂದದ ಅಪಾರ – ಇವೆಲ್ಲವೂ ತುಂಬಿ ತುಳುಕಾಡುತ್ತಿರುತ್ತವೆ. ಸರ್ವಾಂಗದಲ್ಲಿ ಲಿಂಗ ತುಂಬಿ ಸಂಭ್ರಮಿಸುವ ಗಂಭೀರ ದಿವ್ಯ ಅನುಭವವಿರುತ್ತದೆ.

"ಸತ್ತು ಬದುಕಿ ನಿಶ್ಚಿಂತವಾಯಿತ್ತು."

ಈ ಅನುಭವದ ಸಾಧನೆಗೆ ಅವಶ್ಯಕವಾದುದು ಗುರುಕೃಪೆ. ಮಾನವಪ್ರಕೃತಿಯನ್ನು ಕಳೆದು, ಸಂಸಾರಸಾಗರವನ್ನು ದಾಟಿಸಿ, ಲಿಂಗದ ಹಾದಿಗೆ ಹಚ್ಚುತ್ತಾನೆ ಸದ್ಗುರು. ಬಸವಣ್ಣನವರು ಗುರುಕೃಪೆಯನ್ನು ಹೀಗೆ ಬಣ್ಣಿಸುತ್ತಾರೆ:

ಅಯ್ಯಾ, ಎನ್ನ ಆರಾಧ್ಯ ಕೂಡಲಸಂಗಮದೇವಾ, ಎನ್ನೊಳಗೆ ನಿಮ್ಮಿರವ ಈ ಪರಿಯಲ್ಲಿ ಕಾಣಿಸುತ್ತಿರ್ದಿರಲ್ಲಾ

ದೇಹ, ಇಂದ್ರಿಯಗಳನ್ನು ಒಳಗೊಂಡು ದೇಹದೆಲ್ಲಲ್ಲ ಚೈತನ್ಯದ ಬೆಳಕನ್ನು ಬೆಳಗಿಸುವವನೇ ಗುರುನಾಥ ಎನ್ನುವುದು ಬಸವಣ್ಣನವರ ಇಂಗಿತ.

ಮುಂದಿನ ಸಿದ್ಧಿ ಏನು? ಗುರುಕಾರುಣ್ಯದಿಂದ ಇಂದ್ರಿಯಗಳಲ್ಲಿಯೂ ಚೈತನ್ಯಲಿಂಗವನ್ನು ನೋಡಬೇಕು. ಸ್ವತಂತ್ರ ಸಿದ್ಧಲಿಂಗೇಶ್ವರ ಸ್ವಾಮಿಗಳು ಹೇಳುತ್ತಾರೆ:

...ಸರ್ವಾಂಗದಲ್ಲಿ ಲಿಂಗವ ಧರಿಸಿದವನಾಗಿ
ಸರ್ವಾಂಗ ಲಿಂಗವಾಯಿತ್ತು

ಈಗ ಸಾಧಕ ನಿಜವಾಗಿ ಲಿಂಗಾಯತನಾಗುತ್ತಾನೆ. ಲಿಂಗವಂತನಾಗುತ್ತಾನೆ. ಆಗ ಅಲ್ಲಮಪ್ರಭು ಹೇಳುವಂತೆ ಅವನ ಇರುವು "ಸತ್ತು ಬದುಕಿ ನಿಶ್ಚಿಂತವಾಯಿತ್ತು."

ಆಗ ಎಲ್ಲವೂ ಚೈತನ್ಯಮಯವಾಗುತ್ತದೆ. ಪರಿಪೂರ್ಣ ತಾನು ಎಂಬ ಅನುಭವವಾಗುತ್ತದೆ. ಇದೇ ಶರಣರ ಶಿವಯೋಗದ ರಹಸ್ಯ. ಇಂಥ ಚೈತನ್ಯಾತ್ಮಕ ಅರಿವಿನ ಜೀವನದ ಸುಮಧುರ ವರ್ಣನೆಯನ್ನು ಉರಿಲಿಂಗ ಪೆದ್ದಿಗಳು ಹೀಗೆ ಮಾಡುತ್ತಾರೆ:

ಎನ್ನ ಗತಿ ನಿನ್ನ ಗತಿ, ಎನ್ನ ಕೇಳಿಕೆ ನಿನ್ನ ಕೇಳಿಕೆ.
ಎನ್ನ ನೋಟ, ನಿನ್ನ ನೋಟ. ಎನ್ನಂಗಸ್ಪರ್ಶನ ನಿನ್ನಂಗಸ್ಪರ್ಶನ.
ಎನ್ನ ಸುಖಭೋಗವೆಲ್ಲ ನಿನ್ನ ಸುಖಭೋಗ
ಎನ್ನೊಳಗೆ ನೀನು ನಿನ್ನೊಳಗೆ ನಾನು
ಎನ್ನ ಪ್ರಾಣ ನೀನು, ನಿನ್ನ ಪ್ರಾಣ ನಾನಾದ ಕಾರಣ,
ಎನ್ನ ಸೋಂಕಿತ್ತೆಲ್ಲ ನಿಮ್ಮ ಪೂಜೆಯಯ್ಯ
ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ!

ಆಗ ಪೂಜೆ ನಿಜವಾದ ಲಿಂಗಪೂಜೆಯಾಗುತ್ತದೆ. ಅನಂತ ಬ್ರಹ್ಮಾಂಡಗಳು ಎದ್ದು ಬರುವ ಚೈತನ್ಯಲಿಂಗದ ಆರಾಧನೆ ನಡೆಯುತ್ತದೆ. ವೀರಣ್ಣನೆಂಬ ಶರಣ ಹೇಳುತ್ತಾನೆ, ಈ ಬಗೆಯ ಪೂಜೆಯಲ್ಲಿ "ಕೊಂಬಾತನೂ ಅವನೇ, ಅರ್ಪಿಸುವಾತನೂ ಅವನೇ" ಎಂದು. ಚಿತ್ತಶುದ್ಧಿಯ ಮೂಲಕವೇ ಇಂತಹ ಭಕ್ತಿಜ್ಞಾನಗಳ ವಿಕಾಸ. ಚಿತ್ತಶುದ್ಧಿಗೆ ಪೂರ್ವ ಸಿದ್ಧತೆ, ರಕ್ಷಣೆ ಬೇಕು. ಶರಣಧರ್ಮ ಅದಕ್ಕೆ ಎಂಟು ರಕ್ಷಾವರಣಗಳನ್ನು ಹೇಳುತ್ತದೆ; ಆಧ್ಯಾತ್ಮಿಕತೆಯ ವಿಕಾಸದ ಆರು ಷಟ್‌ಸ್ಥಲಗಳನ್ನೂ ವಿವರಿಸುತ್ತದೆ. ಅವುಗಳ ಸಂಗ್ರಹ ಮುಂದಿನ ಸಂಚಿಕೆಯಲ್ಲಿ.

(ಮುಂದುವರಿಯುವುದು)

**ಅನುಭಾವಿಗಳ ಅನುಭವದ ಮಹಿಮೆ**

ಮರ ಮರ ಮಥನಿಸಿ, ಕಿಚ್ಚು ಹುಟ್ಟಿ, ಸುತ್ತಣ
ತರುಮರಾದಿಗಳ ಸುಡಲಾಯಿತ್ತು
ಆತ್ಮವಾತ್ಮ ಮಥನಿಸಿ ಅನುಭಾವ ಹುಟ್ಟಿ
ತನುಗುಣಾದಿಗಳ ಸುಡಲಾಯಿತ್ತು
ಇದು ಕಾರಣ ನಿಮ್ಮ ಅನುಭಾವಿಗಳ ಅನುಭವವ ತೋರಿ
ಎನ್ನೊಡಲನುಳುಹಿಕೊಳ್ಳಯ್ಯಾ ಚೆನ್ನಮಲ್ಲಿಕಾರ್ಜುನಾ

– ಅಕ್ಕಮಹಾದೇವಿ



✻✻✻✻